# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಂಖ್ಯೆ:ಉ.ಆ.(ಕ)/ಪಿ.ಆರ್/729/2008-09**

**ವಿಶೇಷ ಆಯುಕ್ತರು(ಆಡಳಿತ)ರವರ ಕಛೇರಿ**
**ನರಸಿಂಹರಾಜ ಚೌಕ, ಬೆಂಗಳೂರು-02.**
**ದಿನಾಂಕ:-19-09-2008.**

## ಸುತ್ತೋಲೆ

**ವಿಷಯ:**-ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವರ್ಗದವರಿಗೆ ಶೇ.18ರ ಅನುದಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಮಾರ್ಗಸೂಚಿಗಳು.

**ಉಲ್ಲೇಖ:**-ನಗರಾಭಿವೃದ್ಧಿ ಇಲಾಖೆ ಸುತ್ತೋಲೆ ಸಂಖ್ಯೆ:ನಅಇ119/ಟಿಎಂಎಂ/97 ದಿ:22-9-01 ಹಾಗೂ ಸಂಖ್ಯೆ:ನಅಇ31/ಸಮಸ 2006, ದಿನಾಂಕ:10-11-2006.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಉಲ್ಲೇಖಿತ ಸುತ್ತೋಲೆಗಳಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವರ್ಗದವರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ.18ರ ಅನುದಾನದಡಿಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆಂಬ ಮಾರ್ಗದರ್ಶಕ ಸೂತ್ರಗಳನ್ನು ನೀಡಿರುತ್ತಾರೆ. ಸದರಿ ಮಾರ್ಗದರ್ಶಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವರ್ಗದವರಿಗೆ ಆರ್ಥಿಕ ಅಭಿವೃದ್ಧಿ ಕಾಮಗಾರಿಗಳ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ಹೊರಡಿಸಿದೆ.

### ➤ ಫಲಾನುಭವಿಯ ಅರ್ಹತೆಗಳು:

1) ಫಲಾನುಭವಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು.

2) ವಾಸದ ದೃಢೀಕರಣ ಪತ್ರಗಳಾದ ಮತದಾರರ ಗುರುತಿನ ಚೀಟಿ/ಪಡಿತರ ಚೀಟಿ/ನಗರ ಪಾಲಿಕೆಯ ಸಂಬಂಧಪಟ್ಟ ಕಂದಾಯ ಇಲಾಖೆಯಿಂದ ಪಡೆದಿರುವ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.

3) ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

4) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಡು ಬಡವರ ವೈಯಕ್ತಿಕ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಹಿನ್ನೆಲೆಯಲ್ಲಿ ಆದಾಯದ ಮಿತಿ ರೂ.1.00ಲಕ್ಷದ ಒಳಗಿರಬೇಕು.

5) ಕಾಲೋನಿ ಹಾಗೂ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಆದ್ಯತೆ ನೀಡಲಾಗುವುದು.

6) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಪೌರಕಾರ್ಮಿಕರಾದಲ್ಲಿ, ವಾರ್ಷಿಕ ಆದಾಯದ ಮಿತಿಯೊಳಗಿದ್ದಲ್ಲಿ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

## I. <u>ವೈಯಕ್ತಿಕ ಅಭಿವೃದ್ಧಿ ಕಾಮಗಾರಿಗಳಾದ ಉಚಿತ ನಿವೇಶನ, ಮನೆನಿರ್ಮಾಣ, ಮನೆದುರಸ್ತಿ, ನೀರುಪೂರೈಕೆ, ವಿದ್ಯುತ್‌ಶಕ್ತಿಸಂಪರ್ಕ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.</u>

### (A) <u>ಉಚಿತ ನಿವೇಶನಗಳನ್ನು ನೀಡುವುದು:–</u>

1. ಅರ್ಹತೆಗಳನ್ನು ಪೂರೈಸುವ ಫಲಾನುಭವಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವುದು.
2. ಉಚಿತ ನಿವೇಶನಕ್ಕೆ ಅರ್ಜಿ ಸಲ್ಲಿಸುವವರು ಅವರ ಹೆಸರಿನಲ್ಲಾಗಲಿ ಅಥವಾ ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಾಗಲಿ ಸ್ವಂತ ನಿವೇಶನ/ಮನೆ ಹೊಂದಿಲ್ಲವೆಂಬ ಬಗ್ಗೆ ದೃಢೀಕರಣ ಪತ್ರ ಸಲ್ಲಿಸಬೇಕು.
3. ಉಚಿತ ನಿವೇಶನ ನೀಡುವುದಾದರೆ ಫಲಾನುಭವಿಯ ಕುಟುಂಬದಲ್ಲಿ ಈ ಹಿಂದೆ ಸದರಿ ಸೌಲಭ್ಯವನ್ನು ಪಡೆದಿರಬಾರದು. ಈ ಬಗ್ಗೆ ಇತರೆ ಇಲಾಖೆ/ಮಂಡಳಿ/ಪ್ರಾಧಿಕಾರ/ನಿಗಮ ಇತ್ಯಾದಿಗಳಿಂದ ಸೌಲಭ್ಯ ಪಡೆದಿರುವುದಿಲ್ಲ ಎಂಬುದರ ಬಗ್ಗೆ ದೃಢೀಕರಣ ಪಡೆಯಬೇಕು.
4. ಒಂದು ಕುಟುಂಬದಲ್ಲಿ, ಕುಟುಂಬದ ಮುಖ್ಯಸ್ಥರು ಮಾತ್ರ ಉಚಿತ ನಿವೇಶನ ಪಡೆಯಲು ಅರ್ಹರಾಗಿರುತ್ತಾರೆ.
5. ನಿವೇಶನದ ಹಂಚಿಕೆಯ ವಿಸ್ತೀರ್ಣ ಗರಿಷ್ಠ 20X30 ಅಡಿಗಳಿಗೆ ಸೀಮಿತವಾಗಿರಬೇಕು.
6. ಉಚಿತ ನಿವೇಶನವನ್ನು ಪಡೆದ ಫಲಾನುಭವಿಯು, ಸದರಿ ಸ್ಥಳದಲ್ಲಿ ಒಂದು ಅಥವಾ ಎರಡು ವರ್ಷದಲ್ಲಿ <u>ಕನಿಷ್ಠ 1 ಗುಡಿಸಲನ್ನಾದರೂ ನಿರ್ಮಿಸತಕ್ಕದ್ದು.</u>
7. ನಿವೇಶನ ಹಂಚಿಕೆಯಾದ ನಂತರ ಸರ್ಕಾರದ ನಿಯಮಗಳನ್ವಯ ಕನಿಷ್ಠ 15 ವರ್ಷಗಳವರೆಗೆ ಪರಭಾರೆ ಮಾಡತಕ್ಕದ್ದಲ್ಲ. ಒಂದು ವೇಳೆ ಪರಭಾರೆ/ಭೋಗ್ಯ/ದಾನ/ಒಳಬಾಡಿಗೆಗೆ ಕೊಡುವುದು ಇತ್ಯಾದಿಗಳು ಕಂಡುಬಂದಲ್ಲಿ ಯಾವುದೇ ಸೂಚನೆಯಿಲ್ಲದೆ ಉಚಿತ ನಿವೇಶನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನದ ನಿವೇಶನಗಳು ಇಲ್ಲದಿದ್ದಲ್ಲಿ, ಸರ್ಕಾರದ ನಿಯಮಾನುಸಾರ ಹಾಗು ನಗರ ಪಾಲಿಕೆಯ ತೀರ್ಮಾನಗಳಂತೆ ಶೇ.18ರ ಅನುದಾನದಲ್ಲಿ ಭೂಮಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಗೃಹ ಮಂಡಳಿ/ಇತರೆ ಇಲಾಖೆಗಳಿಂದ ಉಚಿತ ಅಥವಾ ರಿಯಾಯಿತಿ ದರದಲ್ಲಿ ಭೂಮಿಯನ್ನು ಖರೀದಿಸಿ ಉಚಿತ ನಿವೇಶನವನ್ನು ನೀಡಬಹುದಾಗಿದೆ.
9. ಉಚಿತ ನಿವೇಶನಗಳನ್ನು ವಿತರಿಸುವಲ್ಲಿ ಕಂದಾಯ ವಿಭಾಗ, ಆಸ್ತಿ ವಿಭಾಗ ಹಾಗೂ ಕಾಮಗಾರಿಗಳ ವಿಭಾಗ ಜಂಟಿ ಸಹಯೋಗದಲ್ಲಿ ಕ್ರಮ ಕೈಗೊಳ್ಳತಕ್ಕದ್ದು.

### (B) <u>ವಸತಿ ನಿರ್ಮಾಣ (ಪಕ್ಕಾ ಮನೆ):–</u>

1. ಅರ್ಹತೆಗಳನ್ನು ಪೂರೈಸುವ ಫಲಾನುಭವಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವುದು.
2. ಫಲಾನುಭವಿಯು ಸ್ವಂತ ಹೆಸರಿನಲ್ಲಿ ನಿವೇಶನ ಹೊಂದಿರತಕ್ಕದ್ದು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು.

..3..

3. ಮಹಿಳೆಯರ ಹೆಸರಿನಲ್ಲಿ ನಿವೇಶನದ ದಾಖಲೆಗಳು ಇದ್ದಲ್ಲಿ ಆದ್ಯತೆ ನೀಡಲಾಗುವುದು.
4. ಮನೆ ನಿರ್ಮಾಣದ ಸ್ಥಳಪರಿಶೀಲನೆ ಹಾಗೂ ತಗಲುವ ಅಂದಾಜುವೆಚ್ಚದ ಪಟ್ಟಿಯನ್ನು ಸಂಬಂಧಪಟ್ಟ ತಾಂತ್ರಿಕವಿಭಾಗದ ನಿಯಂತ್ರಣಾಧಿಕಾರಿಗಳಿಂದ ಅನುಮೋದನೆಯಾಗಿರಬೇಕು.
5. ಮನೆ ನಿರ್ಮಾಣಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳ ಅನುಮೋದನೆ ಪಡೆಯತಕ್ಕದ್ದು.
6. ಮನೆ ನಿರ್ಮಾಣ ಘಟಕದ ಅಂದಾಜು ವೆಚ್ಚಕ್ಕೆ ಒಳಪಟ್ಟು ಶೇ.10ರ ಹಣವನ್ನು ವಂತಿಗೆ ರೂಪದಲ್ಲಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಪಾವತಿಸತಕ್ಕದ್ದು.
7. ಫಲಾನುಭವಿಯು ಮನೆ ನಿರ್ಮಾಣ ಮಾಡಿಕೊಳ್ಳುವುದಾದರೆ ಘಟಕದ ಅಂದಾಜು ವೆಚ್ಚಕ್ಕೆ ತಕ್ಕಂತೆ ಸಹಾಯ ಧನವನ್ನು ನಾಲ್ಕು ಕಂತುಗಳಲ್ಲಿ ಪಾವತಿಸಲಾಗುವುದು.
8. ಪ್ರತಿ ಹಂತದ ಪೋಟೋಗಳನ್ನು ಸಲ್ಲಿಸಬೇಕಾಗಿರುತ್ತದೆ. (ತಳಪಾಯ, ಗೋಡೆ, ಛಾವಣಿ, ಮುಕ್ತಾಯದ ಹಂತ)
9. ಮನೆ ನಿರ್ಮಾಣವನ್ನು ಕೊಳಚೆ ನಿರ್ಮೂಲನಾ ಮಂಡಳಿ/ಗೃಹ ಮಂಡಳಿ/ಇತ್ಯಾದಿ ಸರ್ಕಾರದ ಅಂಗೀಕೃತ ಸಂಸ್ಥೆಗಳು ನಿರ್ಮಾಣ ಮಾಡುವುದಾದರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಹಾಯ ದನವನ್ನು ನಿಯಮಾನುಸಾರ ಮಂಜೂರು ಮಾಡಬಹುದಾಗಿದೆ.
10. ಮನೆ ನಿರ್ಮಾಣವನ್ನು ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಸಹಾಯ ಧನ ನೀಡುವುದರ ಮೂಲಕ ಜಂಟಿ ಸಹಯೋಗದೊಂದಿಗೆ BSUP ಮಾರ್ಗಸೂಚಿಯಂತೆ ಅಥವಾ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಯಂತೆ ಮನೆ ನಿರ್ಮಾಣ ಮಾಡಬಹುದಾಗಿದೆ.

## (C) ಮನೆ ನಿರ್ಮಾಣ (ಕಚ್ಚಾ):–

1. ಅರ್ಹತೆಗಳನ್ನು ಪೂರೈಸುವ ಫಲಾನುಭವಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವುದು.
2. ಫಲಾನುಭವಿಯು ಸ್ವಂತ ಹೆಸರಿನಲ್ಲಿ ಮನೆ ಹೊಂದಿರಬೇಕು ಹಾಗೂ ದಾಖಲೆ ಪತ್ರಗಳನ್ನು ಸಲ್ಲಿಸತಕ್ಕದ್ದು.
3. ಮನೆ ದುರಸ್ತಿಗೆ ಅವಶ್ಯಕವಿರುವ ಸೌಲಭ್ಯಗಳನ್ನು/ವಸ್ತುಗಳನ್ನು ನೀಡಲು ಸಂಬಂಧಪಟ್ಟ ತಾಂತ್ರಿಕವಿಭಾಗದ ನಿಯಂತ್ರಣಾಧಿಕಾರಿಯಿಂದ ಪರಿವೀಕ್ಷಣೆ ಹಾಗೂ ಅಂದಾಜು ಪಟ್ಟಿ ಅನುಮೋದನೆ ಆಗಿರಬೇಕು.
4. ಮನೆ ದುರಸ್ತಿ ಎಂದರೆ ಮೇಲ್ಛಾವಣಿಗೆ ಎ.ಸಿ. ಶೀಟುಗಳು, ಕಿಟಕಿ, ಬಾಗಿಲು ದುರಸ್ತಿ, ಹಾಳಾದ ಗೋಡೆಯ ದುರಸ್ತಿಗೆ ಮಾತ್ರ ಸೀಮಿತವಾಗಿರುತ್ತದೆ.
5. ಕಚ್ಚಾ ಮನೆಯ ದುರಸ್ತಿಯ ಮೊದಲಿನ ಹಂತದ ಪೋಟೋ ಹಾಗೂ ದುರಸ್ತಿಯ ನಂತರ ಪೋಟೋ ಸಲ್ಲಿಸಬೇಕಾಗಿರುತ್ತದೆ.

## (D) ನೀರು ಪೂರೈಕೆ:–

1. ಅರ್ಹತೆಗಳನ್ನು ಪೂರೈಸುವ ಫಲಾನುಭವಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವುದು.
2. ನೀರಿನ ಪೂರೈಕೆಗೆ ನೀರು ಸಂಪರ್ಕ ಒದಗಿಸಲು ತಗಲುವ ಅಂದಾಜು ವೆಚ್ಚವನ್ನು ಸಂಬಂಧಪಟ್ಟ ತಾಂತ್ರಿಕವಿಭಾಗದ ನಿಯಂತ್ರಣಾಧಿಕಾರಿಗಳಿಂದ ಪರಿವೀಕ್ಷಣೆ ಹಾಗೂ ಅಂದಾಜು ಪಟ್ಟಿ ಅನುಮೋದನೆ ಆಗಿರಬೇಕು.
3. ವೈಯುಕ್ತಿಕವಾಗಿ ಶೌಚಾಲಯಗಳ ನಿರ್ಮಾಣ.

**(E) ವಿದ್ಯುತ್ ಚ್ಛಕ್ತಿ ಸಂಪರ್ಕ:–**

1. ಅರ್ಹತೆಗಳನ್ನು ಪೂರೈಸುವ ಫಲಾನುಭವಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡುವುದು.
2. ಸದರಿ ಸೌಲತ್ತನ್ನು ನೀಡಲು ತಗಲುವ ಅಂದಾಜು ವೆಚ್ಚವನ್ನು ಸಂಬಂಧಪಟ್ಟ ತಾಂತ್ರಿಕವಿಭಾಗದ ನಿಯಂತ್ರಣಾಧಿಕಾರಿಗಳಿಂದ ಪರಿವೀಕ್ಷಣೆ ಹಾಗೂ ಅಂದಾಜು ಪಟ್ಟಿ ಅನುಮೋದನೆ ಆಗಿರಬೇಕು.

## II. ಸಮುದಾಯದ ಕಾಮಗಾರಿಗಳು:–

1. ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡದವರಿಗೆ ಅನುಕೂಲವಾಗುವಂತಹ ಸಮುದಾಯದ ಕಾಮಗಾರಿಗಳನ್ನು ಕೈಗೊಳ್ಳಬೇಕಾದರೆ ಕನಿಷ್ಠ ಶೇ.50 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಕಾಲೋನಿ/ಕೊಳಚೆ ಪ್ರದೇಶ/ಹಿಂದುಳಿದ ಪ್ರದೇಶದಲ್ಲಿ ವಾಸಿಸುತ್ತಿರಬೇಕು.
2. ಕಾಲೋನಿ/ಕೊಳಚೆ ಪ್ರದೇಶ/ಹಿಂದುಳಿದ ಪ್ರದೇಶದಲ್ಲಿ ವಾಸಿಸುತ್ತಿರುವ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತಹ ರಸ್ತೆ, ಚರಂಡಿ, ಒಳಚರಂಡಿ, ಬೀದಿದೀಪ, ಶೌಚಾಲಯ, ಅಂಗನವಾಡಿ ಕೇಂದ್ರ, ಶಾಲೆ, ಆಸ್ಪತ್ರೆ, ಸಮುದಾಯಭವನ, ಅಂಬೇಡ್ಕರ್‌ಭವನ, ಗ್ರಂಥಾಲಯ, ರಸ್ತೆ ಡಾಂಬರೀಕರಣ, ಇತ್ಯಾದಿ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಬಹುದಾಗಿದೆ.
3. ಮೇಲ್ಕಂಡ ಅಂಶಗಳ ವ್ಯಾಪ್ತಿಯಲ್ಲಿ ಬಾರದ, ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆರ್ಥಿಕ ಅಭಿವೃದ್ಧಿಗೆ ಪ್ರಯೋಜನಕಾರಿಯೆಂದು ಕಂಡುಬರುವ ಸೌಲಭ್ಯಗಳನ್ನು ಕಾಲೋನಿ/ ಕೊಳಚೆ ಪ್ರದೇಶ/ಹಿಂದುಳಿದ ಪ್ರದೇಶಗಳಲ್ಲಿ ಎಲ್ಲಿ ಕನಿಷ್ಠ ಶೇ.50ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ವಾಸಿಸುತ್ತಿದ್ದಲ್ಲಿ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.

ಮೇಲೆ ತಿಳಿಸಿರುವ ಎಲ್ಲಾ ಕಾಮಗಾರಿಗಳ ಮೊದಲಿನ ವಾಸ್ತವ ಸ್ಥಿತಿಯ ಪೋಟೋ ಹಾಗೂ ಕಾಮಗಾರಿ ಮುಕ್ತಾಯದ ನಂತರ ಕಾಮಗಾರಿಯ ಪೋಟೋಗಳನ್ನು ತೆಗೆದು ಕಡತದಲ್ಲಿಡಬೇಕು. ಮೇಲಾಧಿಕಾರಿಗಳ ಪರಿಶೀಲನೆ ವೇಳೆಯಲ್ಲಿ ಹಾಜರುಪಡಿಸುವಂತೆ ಸೂಚಿಸಿದೆ.

ಮೇಲ್ಕಂಡ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಿ ಅನುಷ್ಠಾನ ಮಾಡುವಾಗ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಶೇ18ರ ಅನುದಾನದಡಿಯಲ್ಲಿ ಕಾಮಗಾರಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಕಲ್ಯಾಣ ವಿಭಾಗದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯತಕ್ಕದ್ದು. ಅಲ್ಲದೇ ಪ್ರತಿ ಮಾಹೇ ಕಾಮಗಾರಿಗಳ ಪ್ರಗತಿಗಳ ವಿವರ ಹಾಗೂ ಅನುದಾನದ ವೆಚ್ಚಗಳನ್ನು ತಪ್ಪದೇ ಕಲ್ಯಾಣ ವಿಭಾಗಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಈ ಸುತ್ತೋಲೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದಲ್ಲಿ, ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ನೇರ ಜವಾಬ್ದಾರರಾಗಿರುತ್ತಾರೆ. ಅಲ್ಲದೆ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸ್ಪಷ್ಟ ಪಡಿಸಲಾಗಿದೆ.

*ಸಹಿ/–*
*ವಿಶೇಷ ಆಯುಕ್ತರು (ಆಡಳಿತ)*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*